ಅ) ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಕಂದಾಯ ಬಾಕಿಗಾಗಿ "ಸರ್ಕಾರಿ ಪಡಾ" ಎಂದು ನಮೂದಿಸಿರುವುದನ್ನು ದಾಖಲೆಗಳಿಂದ ಕಡಿಮೆ ಮಾಡಿ ಹಿಂದಿನ ಭೂ ಮಾಲೀಕರಿಗೆ ಜಮೀನನ್ನು ವರ್ಗಾಯಿಸುವ ಕಂದಾಯ ಕಾಯಿದೆ ತಿದ್ದುಪಡಿಯಾದ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಮೇಲ್ಕಂಡ ತಿದ್ದುಪಡಿ ಆಧಾರಿಸಿ ಸರ್ಕಾರಿ ಆಜ್ಞೆ ಜಾರಿಗೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಪ್ರತಿಯನ್ನು ಶಾಸಕರಿಗೆ ಒದಗಿಸಲಾಗಿದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ಕ್ಕೆ ಕರ್ನಾಟಕ ಕಾಯ್ದೆ 28:1991ರ ಮೂಲಕ ತಂದ ತಿದ್ದುಪಡಿಯಂತೆ ತಹಶೀಲ್ದಾರರು ಯಾವುದೇ ಭೂ ಹಿಡುವಳಿಯನ್ನು ಭೂ ಕಂದಾಯ ಬಾಕಿ ರೂ. 10,000-0ಕ್ಕೆ ಮೀರಿಲ್ಲದೆ ಇದ್ದರೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತಿಲ್ಲ. ಮತ್ತು ದಿನಾಂಕ 7-8-91ಕ್ಕೆ ಮುಂಚೆ ರೂ. 10,000-00 ಕ್ಕಿಂತ ಹೆಚ್ಚು ಭೂ ಕಂದಾಯ ಬಾಕಿ ಇರದಿದ್ದ ಪ್ರಕರಣದಲ್ಲಿ ಜಮೀನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸಿದ್ದರೆ, ಅಂತಹ ಪ್ರಕರಣಗಳನ್ನು ಅಂತ್ಯಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

ಆ) ಮತ್ತು ಇ) ಕಾಯ್ದೆಗೆ ತಿದ್ದುಪಡಿಯನ್ನು ತಂದಿರುವ ಕಾರಣ ಸರ್ಕಾರಿ ಆದೇಶವನ್ನು ಹೊರಡಿಸುವ ಅವಶ್ಯಕತೆ ಇರುವುದಿಲ್ಲ. ಸದರಿ ತಿದ್ದುಪಡಿಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಕೊಳಚೆ ನಿರ್ಮೂಲನ ಮಂಡಳಿಯಿಂದ ನಿರ್ಮಿಸಿರುವ ಮನೆಗಳ ಸಂಖ್ಯೆ

525 - ಶ್ರೀ ಎಂ. ಮಹದೇವ್ (ನಂಜನಗೂಡು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನ ಮಂಡಳಿಯಿಂದ ರಾಜ್ಯದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ? ಇವುಗಳಲ್ಲಿ ಪೂರ್ಣಗೊಂಡಿರುವ ಮನೆಗಳೆಷ್ಟು ಮತ್ತು ಅಪೂರ್ಣಗೊಂಡಿರುವ ಮನೆಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಅಪೂರ್ಣಗೊಂಡಿದ್ದಲ್ಲಿ ಪೂರ್ಣಗೊಳಿಸಲು ತಗಲುವ ವೆಚ್ಚವೆಷ್ಟು?

ಇ) ಕೊಳಚೆ ನಿರ್ಮೂಲನ ಮಂಡಳಿಯಿಂದ ನಿರ್ಮಿಸಲ್ಪಟ್ಟಿರುವ ಮನೆಗಳು ಕೀಳು ದರ್ಜೆಯದೆಂದು ದೂರು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಈ) ಆಗಿದ್ದಲ್ಲಿ ತೆಗೆದುಕೊಂಡ ಕ್ರಮವೇನು?

ಉ) ಮುಂದೆ ಈ ಮಂಡಳಿಯಿಂದ ಎಷ್ಟು ಮನೆಗಳ ನಿರ್ಮಾಣ ಮಾಡಲು ಯೋಚಿಸಲಾಗಿದೆ?

ಊ) ಕೊಳಚೆ ನಿರ್ಮೂಲನ ಮಂಡಳಿಯಿಂದ ಕಂಟ್ರಾಕ್ಟ ಮಾಡುತ್ತಿರುವವರ ಹೆಸರು ಮತ್ತು ಅವರುಗಳಿಗೆ ಕೊಟ್ಟಿರುವ ಮನೆಯ ಕಟ್ಟಡದ ಕೆಲಸ ಮತ್ತು ನೀಡಿರುವ ಮುಂಗಡ ಹಣವೆಷ್ಟು?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಮಂಡಳಿಯ ಪ್ರಾರಂಭದಿಂದ (1975)1994ರ ಮಾರ್ಚ್ ಅಂತ್ಯದವರೆಗೆ 15433 ಆರ್ಥಿಕವಾಗಿ ದುರ್ಬಲ ವರ್ಗದ ಮನೆಗಳನ್ನು ನಿರ್ಮಿಸುತ್ತಿದ್ದು, ಇವುಗಳ ಪೈಕಿ 10665ಎಲ್ಲಾ ರೀತಿಯಲ್ಲೂ ಪೂರ್ಣಗೊಂಡಿದೆ ಉಳಿದ 4768 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಕೊಡಲಾಗಿದೆ.

ಆ) ಅಪೂರ್ಣಗೊಂಡಿರುವ 4768 ಮನೆಗಳು ಪೂರ್ಣಗೊಳ್ಳಲು 852.81 ಲಕ್ಷ ರೂಗಳು ಬೇಕಾಗುತ್ತದೆ.

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಸಕ್ತ 1994-95ರ ಸಾಲಿನಲ್ಲಿ ಒಟ್ಟು 6500 ಮನೆಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ.

ಊ) ಪ್ರಸ್ತುತ ಮಂಡಳಿಯಲ್ಲಿ ಕಂಟ್ರಾಕ್ಟ ಮಾಡುತ್ತಿರುವವರ ಹೆಸರು ಅವರುಗಳಿಗೆ ಕೊಟ್ಟಿರುವ ಮನೆಯ ಕಟ್ಟಡದ ಕೆಲಸದ ಪಟ್ಟಿಯನ್ನು ಅನುಬಂಧ-2ರಲ್ಲಿ ಕೊಡಲಾಗಿದೆ. ಯಾವುದೇ ಗುತ್ತಿಗೆದಾರರಿಗೆ ಮಂಡಳಿಯಿಂದ ಮುಂಗಡ ಹಣ ನೀಡಿರುವುದಿಲ್ಲ.

ಅನುಬಂಧ-1

ಮಂಡಳಿಯ ಪ್ರಾರಂಭದಿಂದ (1975) ತೆಗೆದುಕೊಂಡು ಪೂರ್ಣಗೊಳಿಸಿರುವ ವಸತಿ ಗೃಹಗಳ ಪಟ್ಟಿ

ಕ್ರಮ ಸಂಖ್ಯಾ	ಜಿಲ್ಲೆಯ ಹೆಸರು	ನಿರ್ಮಿಸುತ್ತಿರುವ ಒಟ್ಟು ಮನೆಗಳು	ಪೂರ್ಣಗೊಂಡಿರುವ ಮನೆಗಳು	ಅಪೂರ್ಣಗೊಂಡಿರುವ ಮನೆಗಳು	ಪೂರ್ಣಗೊಳ್ಳಲು ಬೇಕಾಗುವ ಹಣ (ಲಕ್ಷ ರೂಗಳಲ್ಲಿ)
1.	ಬೆಂಗಳೂರು ನಗರ	5370	3446	1924	412.43
2.	ಬೆಂಗಳೂರು ಗ್ರಾಮೀಣ	685	473	212	51.52
3.	ತುಮಕೂರು	252	192	60	25.00
4.	ಕೋಲಾರ	460	322	138	27.00
5.	ಶಿವಮೊಗ್ಗ	243	143	100	25.00
6.	ಚಿತ್ರದುರ್ಗ	483	396	42	32.49
7.	ಮೈಸೂರು	2639	1976	663	82.82
8.	ಮಂಡ್ಯ	1184	998	186	29.96
9.	ಕೊಡಗು	-	-	-	-
10.	ಹಾಸನ	462	430	32	76.34
11.	ಚಿಕ್ಕಮಗಳೂರು	50	-	50	19.50
12.	ದಕ್ಷಿಣ ಕನ್ನಡ	100	46	54	7.20
13.	ಹುಬ್ಬಳ್ಳಿ	1201	850	351	15.00
14.	ಉತ್ತರ ಕನ್ನಡ	204	104	100	2.00
15.	ಬಳ್ಳಾರಿ	488	70	418	8.00
16.	ರಾಯಚೂರು	324	264	60	6.00
17.	ಗುಲ್ಬರ್ಗಾ	467	287	180	5.25
18.	ಬೀದರ್	322	170	152	6.30
19.	ಬಿಜಾಪುರ್	324	324	-	-
20.	ಬೆಳಗಾಂ	220	174	46	21.00
	ಒಟ್ಟು	15433	10665	4768	852.81

ಅನುಬಂಧ-2

ಮಂಡಳಿಯಲ್ಲಿ ಹಾಲಿ ಕೆಲಸ ಮಾಡುತ್ತಿರುವ ಕಂಟ್ರಾಕ್ಟರುಗಳ ಹೆಸರು ಮತ್ತು ಅವರುಗಳಿಗೆ ಕೊಟ್ಟಿರುವ ಕೆಲಸದ ಪಟ್ಟಿ.

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು	ಕೆಲಸದ ಹೆಸರು	ಮನೆಗಳು
1	2	3	4
	ಶ್ರೀಯುತರುಗಳು:		
1.	ಕೆ.ಕೆ. ರಾಧಕೃಷ್ಣ	ಸಂಜಯಗಾಂಧಿ ನಗರ, ಬೆಂಗಳೂರು	100
2.	ಜಿ. ವೆಂಕಟೇಶ ರೆಡ್ಡಿ	ರಾಜೇಶ್ವರಿ ಕೊಳಚೆ ಪ್ರದೇಶ, ಬೆಂಗಳೂರು	48
3.	ಜಿ. ವೆಂಕಟೇಶ ರೆಡ್ಡಿ	- ಡಿಟೋ - 2ನೇ ಹಂತ	56
4.	ಜಿ. ವೆಂಕಟೇಶ ರೆಡ್ಡಿ	ಸರ್ವೆ ನಂ 11 ಮತ್ತು 12 ಲಗ್ಗೆರೆ (ಗುಲ್ಬರ್ಗ ಕೊಳಚೆ ಪ್ರದೇಶ ನಿವಾಸಿಗಳನ್ನು ಸ್ಥಳಾಂತರಿಸಲು)	88
5.	ಸಿ.ಎಲ್. ಮುನಿಯಪ್ಪ	- ಡಿಟೋ - 2ನೇ ಹಂತ	64
6.	ರಾಮಕೃಷ್ಣ	ಹೆಗ್ಗಡೆ ಕಾಲೋನಿ, ತುಮಕೂರು	192
7.	ಜಯರಾಮರೆಡ್ಡಿ	ದೇವರ ಹೊಸಹಳ್ಳಿ, ಗೌರಿಬಿದನೂರು	100
8.	ಜಯರಾಮರೆಡ್ಡಿ	ವೆಂಕಟಗಿರಿ ಕೋಟೆ, ಚಿಂತಾಮಣಿ	60
9.	ಸದಾಶಿವರೆಡ್ಡಿ	- ಡಿಟೋ -	60
10.	ಶಿವಕುಮಾರ್	ಎ.ಕೆ. ಕಾಲೋನಿ, ಮಾಲೂರು	36
11.	ಯು.ಎನ್. ಪದ್ಮನಾಭರಾವ್	ನೆಲ್ಲೂರು ಶೇಡ್, 2ನೇ ಹಂತ, ಮೈಸೂರು 4ನೇ ಬ್ಲಾಕ್	48
12.	ಎಂ. ಸುಬ್ರಮಣ್ಯ	- ಡಿಟೋ - 5ನೇ ಬ್ಲಾಕ್	48
13.	ಎಂ. ಸುಬ್ರಮಣ್ಯ	- ಡಿಟೋ - 6ನೇ ಬ್ಲಾಕ್	32
14.	ಸಿದ್ದೇಗೌಡ ಮತ್ತು ಮಕ್ಕಳು	ಸಹಕಾರ ಭವನ ಹಿಂಭಾಗ, ಮೈಸೂರು	50
15.	ಯು.ಎನ್. ಪದ್ಮನಾಭರಾವ್	ಎ.ಕೆ. ಕಾಲೋನಿ, 2ನೇ ಹಂತ, ನಂಜನಗೂಡು	50
16.	ಯು.ಎನ್. ಪದ್ಮನಾಭರಾವ್	- ಡಿಟೋ -	20
17.	ಯು.ಎನ್. ಪದ್ಮನಾಭರಾವ್	ಅಶೋಕಪುರಂ, ನಂಜಗೂಡು	40
18.	ಸೋಮಶೇಖರ್	ಪೌರಕಾರ್ಮಿಕ ಕಾಲೋನಿ, ಕೋಳ್ಳೇಗಾಲ	90

19.	ರಾಮಚಂದ್ರ	ಡಿಟೋ	
20.	ಆರ್. ಜಯರಾಮರೆಡ್ಡಿ	ಗಿರಿಜಾ ಟಾಕೀಸ್ ಮುಂಭಾಗ, ಮಂಡ್ಯ	120
21.	ಹೆಚ್. ಕೃಷ್ಣ	ಗೌರಿಸಮಾಜ, ಮಂಡ್ಯ	80
22.	ಹೆಚ್.ಕೆ. ಮಂಜುನಾಥ್	ಪೌರಕಾರ್ಮಿಕ ಕಾಲೋನಿ, ಮಳವಳ್ಳಿ	30
23.	ಶಿವಾರೆಡ್ಡಿ	ಮಂಡಕ್ಕಿಭಟ್ಟಿ ಎರಿಯಾ, ದಾವಣಗೆರೆ	64
24.	ಸಿ.ಎಸ್. ಪುರುಶೋತ್ತಮ	ಇಂದಿರ ಕಾಟೇಜ್, ಚೆನ್ನಪಟ್ಟಣ	50
25.	ಸಿ.ಎಸ್. ಪುರುಶೋತ್ತಮ	ಅನಂದಪುರಂ, ಚೆನ್ನಪಟ್ಟಣ	50
26.	ಬಿ. ಗೋವಿಂದರಾಜ್	ವರಹಾ ಕಾಲೋನಿ, ಮಾಗಡಿ	30
27.	ಟಿಜಿ. ಸೇಠ್, ಹುಬ್ಬಳ್ಳಿ	ಗಾಂಧಿನಗರ, ಬೆಂಗೇರಿ, ವೀರಾಪುರ ಒಣ	90
28.	ಟಿಜಿ. ಸೇಠ್, ಹುಬ್ಬಳ್ಳಿ	ಗೊಲ್ಲರ ಓಣಿ ಕಾಲೋನಿ, ಮೋಹರ್ ಜೋಪಡಿ.	90
29.	ಎಸ್.ಬಿ. ಕಾಬ್ರಾ	ಇಂದಿರಾನಗರ, ಹಾನಗಲ್	119
30.	ಜಿವಿ. ಪಂಚಾಂಗಮಠ	ಜೌಳಸ್ಲಮ್, ಗದಗ	150
31.	ಟಿಜಿ. ಶೇಟ್	ಕೈಪಾಲಿ ಎಸ್ಟೇಟ್, ಹುಬ್ಬಳ್ಳಿ	40
32.	ಟಿಜಿ ಶೇಟ್	ಸುಡುಗಾಡು ಸಿದ್ದ ಸಮಾಜ, ಧಾರವಾಡ	70
33.	ಶಿವರಾಜ್ ಕಾಮಶೆಟ್ಟಿ	ಹೊಸ ಹರಿಜನವಾಡ, ಬಸವಕಲ್ಯಾಣ	116
34.	ಷಣ್ಮುಗಪ್ಪ	ಹರಿಜನವಾಡ, ಶಹಪುರ	30
35.	ಸೈಯದ್ ಖುರ್ಶಿದ್ ಹುಸೇನ್	ಜೋಷಿವಾಡ, ಗುಲ್ಬರ್ಗ	31
36.	ಪಿಆರ್. ಶ್ರೀನಿವಾಸನ್	ಬಿದರಿಗ್ರಾಮ, ಬೀದರ್	74
37.	ಸೋಮಕೊಂಡರೆಡ್ಡಿ	ಲಂಬಾಣಿತಾಂಡ, ರಾಯಚೂರು	50
38.	ಪಿ. ಸೋಮಕೊಂಡರೆಡ್ಡಿ	ವಡ್ಡವಾಡಿ, ಗಂಗಾವತಿ	50
39.	ಸೈಯದ್ ಶರೀಫ್ ಹುದ್ದೀನ್	ಗದ್ವಲ್ ಕ್ಯಾಂಪ್, ಗಂಗಾವತಿ	25
40.	ಸೈಯದ್ ಶರೀಫ್ ಹುದ್ದೀನ್	ಬಲ್ಡಟ್ರಂಬ್ ನಿಯರ್ ಕಿಲ್ಲ್, ಗಂಗಾವತಿ	25
41.	ಮುತ್ಯಾಲು	ಕೊಪ್ಪಳದಲ್ಲಿ ಕಟ್ಟುತ್ತಿರುವ ಮನೆಗಳು	50
42.	ಮುತ್ಯಾಲು	- ಡಿಟೋ - ಬ್ಲಾಕ್-2	50

43.	ಕೆ.ಎಂ. ಕೊಟ್ರಯ್ಯ	ಶಿರಗುಪ್ಪ ಪಟ್ಟಣದ ಬ್ಲಾಕ್ ನಂ. 4 ಚೆನ್ನಮ್ಮನಹಳ್ಳಿ ಕೊಳಚೆ ಪ್ರದೇಶ ಬ್ಲಾಕ್-2	50
44.	ವಿ. ರಾಜೇಂದ್ರ	- ಡಿಟೋ - ಬ್ಲಾಕ್-1	50
45.	ಬಿ.ಆರ್. ಪಾಟೀಲ್	ನಿಪ್ಪಾಣಿ ನಗರದ ನೆಲಗೆಜಾಳ ಕೊಳಚೆ ಪ್ರದೇಶ	30
46.	ವಿ. ಮುತ್ಯಾಲು	ಬಸವನ ಬಗೇವಾಡಿ, ಬಸವನಗರ	25

ವಿಶೇಷ ಘಟಕ ಯೋಜನೆ ಅಡಿ ಬಿಡುಗಡೆಯಾದ ಹಣದ ಬಗ್ಗೆ

85 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಅಡಿ ನಿಗದಿಗೊಳಿಸಿದ ಒಟ್ಟು ಹಣವೆಷ್ಟು; ಇದರಲ್ಲಿ ಖರ್ಚಾದ ಹಣ ಹಾಗೂ ಬಾಕಿ ಉಳಿದ ಹಣವೆಷ್ಟು?

ಆ) ಹಣ ಖರ್ಚಾಗದೆ ಉಳಿಯಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳಿಗೆ ನಿಗದಿಗೊಳಿಸಿದ ಒಟ್ಟು ಹಣ ವಿಶೇಷ ಕೇಂದ್ರೀಯ ಸಹಾಯಧನ ಸೇರಿ ರೂ. 293.52 ಕೋಟಿಗಳು.

ಇದರಲ್ಲಿ ಖರ್ಚಾದ ಹಣ ರೂ. 271.76 ಕೋಟಿಗಳು ಮತ್ತು ಬಾಕಿ ಉಳಿದ ಹಣ ರೂ. 21.75 ಕೋಟಿಗಳು.

ಆ) 1993-94ನೇ ಸಾಲಿನಲ್ಲಿ ಕೆಲವು ಇಲಾಖೆಗಳ ಹೊಸ ಯೋಜನೆಗಳಿಗೆ ಅಂಗೀಕಾರ ಸಕಾಲದಲ್ಲಿ ದೊರೆಯುದೇ ಇದ್ದ ಕಾರಣ ಹಣ ಬಾಕಿ ಉಳಿದಿದೆ.

ಪ್ರಕೃತಿ ವಿಕೋಪದಿಂದಾಗಿರುವ ಹಾನಿ

89 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)

1990-91, 1991-92,1992-93, 1993-94ನೇ ಸಾಲುಗಳಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ನಷ್ಟವೆಷ್ಟು?

ಆ) ಈ ಸಾಲುಗಳಲ್ಲಿ ಕೇಂದ್ರದ ನೆರವನ್ನು ಕೋರಿ ರಾಜ್ಯ ಸರ್ಕಾರದವರು ಮನವಿಗಳನ್ನೇನಾದರೂ ಸಲ್ಲಿಸಿರುವರೆ?

ಇ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಸದರಿ ಸಾಲುಗಳಲ್ಲಿ ಬಂದ ಪರಿಹಾರ ಎಷ್ಟು? ಮತ್ತು ಯಾವ ರೂಪದಲ್ಲಿ ವರ್ಷವಾರು ವಿವರಗಳನ್ನು ಒದಗಿಸುವುದು)

ಶ್ರೀ ಧರಮ್‌ಸಿಂಗ್ (ಕಂದಾಯ ಸಚಿವರು) :

ಅ) ಈ ಸಾಲುಗಳಲ್ಲಿ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಉಂಟಾದ ನಷ್ಟ ಕೆಳಕಂಡಂತೆ ಇದೆ: